*ನೂಪುರ ಭ್ರಮರಿ ಸಂಶೋಧನಾ ಪ್ರತಿಷ್ಠಾನ(ರಿ.)*

**'ಸಾನ್ನಿಧ್ಯ', ದೇಚೂರು ರಸ್ತೆ, ಅಶ್ವತ್ಥಕಟ್ಟೆ ಹತ್ತಿರ, ಮಡಿಕೇರಿ, ಕೊಡಗು 571201.**

# ರಾಜ್ಯಮಟ್ಟದ ನೃತ್ಯ ಸಂಶೋಧನಾ ಕಮ್ಮಟ/ವಿಚಾರವೇದಿಕೆ

## ವಿಷಯ : "ನೃತ್ಯ ಸಂಶೋಧನೆ : ಪ್ರಕ್ರಿಯೆ ಮತ್ತು ಸವಾಲುಗಳು"

**ಕರ್ನಾಟಕದಲ್ಲಿ ನೃತ್ಯಸಂಸ್ಕೃತಿಗೆ ಸಂಬಂಧಿಸಿದಂತೆ ವಸ್ತುನಿಷ್ಠ ಅಧ್ಯಯನ, ಕ್ರಮಬದ್ಧವಾದ ಸಂಶೋಧನಾಕ್ರಮ ಮತ್ತು ಅವಕಾಶಗಳಿಗಾಗಿ ಒಂದು ದಿನದ ಸಂಶೋಧನಾ ಕಮ್ಮಟ/ಸಂಶೋಧನಾ ಪ್ರಬಂಧ ಮಂಡನೆಯನ್ನು ಕರ್ನಾಟಕ ಸಂಶೋಧಕರ ಒಕ್ಕೂಟ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ನೂಪುರ ಭ್ರಮರಿ ಸಂಶೋಧನಾ ಪ್ರತಿಷ್ಠಾನವು ಫೆಬ್ರವರಿ 20, 2012ರಂದು ಬೆಂಗಳೂರಿನಲ್ಲಿ ಆಯೋಜಿಸಲಿದೆ.**

**ಕಮ್ಮಟದ ಪ್ರಮುಖ ವಿಷಯಗಳು: ನೃತ್ಯ ಇತಿಹಾಸ, ನೃತ್ಯಶೈಲಿಯ ಪುನರ್ ರಚನೆ ಮತ್ತು ಮಾಧ್ಯಮ ಸಂಬಂಧ ವಿಶ್ಲೇಷಣೆ.**

**ಈ ನಿಟ್ಟಿನಲ್ಲಿ ಆಸಕ್ತ ಸಂಶೋಧಕರು, ಹಿರಿಯ ಕಲಾವಿದರು, ಸಂಶೋಧನಾ ವಿದ್ಯಾರ್ಥಿಗಳಿಗೆ(ಪಿಎಚ್‌ಡಿ/ಎಂಎ/ಎಂಫಿಲ್) ಸಂಶೋಧನಾ ಲೇಖನಗಳ ಮಂಡನೆಗೆ ಅವಕಾಶವಿದ್ದು, ಲೇಖಕರು-ವಿದ್ವಾಂಸರು-ಮಾಧ್ಯಮ ಪ್ರತಿನಿಧಿಗಳು ಕಮ್ಮಟದಲ್ಲಿ ಭಾಗವಹಿಸಬಹುದು.**

### ನಿಯಮಾವಳಿಗಳು

- ಸಂಶೋಧನಾ ಲೇಖನವು ನೂತನವಾಗಿದ್ದು ಕನ್ನಡದಲ್ಲಿರಬೇಕು. ಈ ಹಿಂದೆ ಎಲ್ಲಿಯೂ ಮಂಡನೆಯಾಗಲೀ, ಪ್ರಕಟವಾಗಲೀ ಆಗಿರಕೂಡದು. ಕರ್ನಾಟಕ ನೃತ್ಯಸಂಸ್ಕೃತಿ ಪರವಾದ ವಿಚಾರಗಳ ಮಂಥನಕ್ಕೆ ಅನುಕೂಲವೆನಿಸುವ ಪ್ರಾಯೋಗಿಕ ನೆಲೆಯುಳ್ಳ ಪ್ರವೇಶಗಳಿಗೆ ಮೊದಲ ಆದ್ಯತೆ. ವಿಚಾರಪ್ರಸ್ತಾಪಗಳು ನೃತ್ಯದ ಶಾಸ್ತ್ರೀಯತೆ, ವ್ಯಾಖ್ಯಾನ, ಶೈಕ್ಷಣಿಕ ನೆಲೆ, ಸಮಕಾಲೀನ ಬೆಳವಣಿಗೆ, ಸಾಮಾಜಿಕ ಪರಿಕಲ್ಪನೆ, ಸಂಗೀತ, ಜನಪದಗಳ ನಿಟ್ಟಿನಲ್ಲೂ ಇರಬಹುದು.
- ಲೇಖನ ಪ್ರಕಟಣೆಯ ಸಂಪೂರ್ಣ ಹಕ್ಕು ಪ್ರತಿಷ್ಠಾನ ಮತ್ತು ಒಕ್ಕೂಟದ್ದು. ವಿಚಾರಸಂಕಿರಣದ ತರುವಾಯ ಲೇಖನಗಳ ಸಂಪೂರ್ಣ ಪ್ರತಿಯನ್ನು ಪುಸ್ತಕರೂಪದಲ್ಲಿ ಹೊರತರಲಾಗುವುದು.
- ಸಂಶೋಧನಾ ಲೇಖನಗಳ ಸಂಕ್ಷೇಪವನ್ನು ಫುಲ್‌ಸ್ಕೇಪ್ ಹಾಳೆಯಲ್ಲಿ 3 ಪುಟ ಇಲ್ಲವೇ 300 ಪದ ಮೀರದಂತೆ ಕಳಿಸಬೇಕು. ಈ ಮೈಲ್ ಮೂಲಕ ಪ್ರವೇಶಗಳನ್ನು ಕಳಿಸಲು ಅವಕಾಶವಿದೆ. ಲೇಖನಗಳು ಸೈದ್ಧಾಂತಿಕವಾಗಿ ಇಲ್ಲವೇ ಪ್ರಾಯೋಗಿಕವಾದ ಪ್ರಾತ್ಯಕ್ಷಿಕೆಯ ನೆಲೆಯಲ್ಲಿಯೂ ಇರಬಹುದು. ಸೈದ್ಧಾಂತಿಕವಾದ ಲೇಖನಗಳಿಗೆ ಪ್ರಾಯೋಗಿಕಸ್ಪರ್ಶದ ಅಗತ್ಯವಿದ್ದಲ್ಲಿ ಅದನ್ನು ಅಭ್ಯರ್ಥಿಗಳು ಅದನ್ನು ನೆರವೇರಿಸಲು ಸಿದ್ಧವಿರಬೇಕು. ಸಂಕ್ಷೇಪದಲ್ಲಿ ಲೇಖನದ ಶೀರ್ಷಿಕೆ, ರಚನಕಾರರ ಸಹಭಾಗಿತ್ವ, ಸಂಶೋಧನಾ ಉದ್ದೇಶ, ಅಧ್ಯಯನ ವಿಧಾನ-ಕ್ರಮ-ನಡಾವಳಿ-ತರ್ಕ-ಆಧಾರಗಳು ಸ್ಪಷ್ಟವಾಗಿ ಮತ್ತು ಸಮಗ್ರವಾಗಿ ನಿರೂಪಿಸಲ್ಪಟ್ಟಿರಬೇಕು. ಪ್ರತ್ಯೇಕ ಹಾಳೆಯಲ್ಲಿ ಸ್ವವಿವರ, ಲೇಖಕರ ಸಂಶೋಧನಾ ಹಿನ್ನಲೆ, ಸಂಪರ್ಕ ವಿಳಾಸ, ಈಮೈಲ್ ವಿಳಾಸ, ದೂರವಾಣಿ ಸಂಖ್ಯೆಗಳನ್ನು ನಮೂದಿಸಬೇಕು.
- ಲೇಖನಗಳನ್ನು ಸೂಕ್ತವಾಗಿ ವಿಭಾಗಿಸಿ ಆಯ್ಕೆ ಮಾಡಿದ ತರುವಾಯ ಅವಕಾಶ ನೀಡಲಾಗುವುದು. ಸೂಕ್ತವೆನಿಸುವ ಲೇಖನಗಳು ವಿಚಾರಸಂಕಿರಣದಲ್ಲಿ ಮಂಡನೆಗೆ ಅರ್ಹವಾಗಲಿದ್ದು; ಲೇಖನದ ಸತ್ವ ಮತ್ತು ಸಮಯದ ಮಿತಿಯಲ್ಲಿ ಮಂಡನೆ ಮತ್ತು ಪ್ರಶ್ನೋತ್ತರ ಸಮಯದ ಅವಕಾಶವನ್ನೀಯಲಾಗುವುದು. ಈ ಕುರಿತಂತೆ ಲೇಖನಗಳ ಆಯ್ಕೆಯ ಕುರಿತ ವಿವರಗಳನ್ನು ಲೇಖನಗಳು ತಲುಪಿದ 15 ದಿನದೊಳಗೆ ಪೂರ್ವ ತಯಾರಿಗಾಗಿ ಮಾಹಿತಿ ನೀಡಲಾಗುವುದು.
- ಕಮ್ಮಟದಲ್ಲಿ ಭಾಗವಹಿಸಲಿಚ್ಚಿಸುವ ಅಭ್ಯರ್ಥಿಗಳು 18ವರ್ಷ ಮೇಲ್ಪಟ್ಟವರಾಗಿದ್ದು; ನೃತ್ಯದಲ್ಲಿ ಒಂದಷ್ಟು ಪ್ರೌಢ ಶಿಕ್ಷಣ, ಅನುಭವ ಅಥವಾ ಸಂಶೋಧನಾಸಕ್ತಿ ಹೊಂದಿದ್ದು ; ಸಂವಾದ ಮತ್ತು ಪ್ರಶ್ನೋತ್ತರ ಸರಣಿಗಳಲ್ಲಿ ಉತ್ಸುಕರಾಗಿ ಭಾಗವಹಿಸುವಂತಿರಬೇಕು. ವಿದ್ವತ್ಪೂರ್ಣ ಸಂಶೋಧಕರಿಗೆ ಕಮ್ಮಟದ ಸಮಾಲೋಚನೆಯಲ್ಲಿ ಭಾಗವಹಿಸಲು ಅವಕಾಶವಿದೆ. ಈ ಕುರಿತಂತೆ ಆಸಕ್ತರು ಮುಂಚಿತವಾಗಿ ಹೆಸರು ನೋಂದಾಯಿಸಬೇಕು. (ಅಭ್ಯರ್ಥಿಗಳು ವಿದ್ಯಾರ್ಥಿಗಳಾಗಿದ್ದ ಪಕ್ಷದಲ್ಲಿ ಯಾವುದೇ ನೃತ್ಯದ ಪರೀಕ್ಷಾ ಪದವಿಯ ಪ್ರಮಾಣಪತ್ರದ ಪ್ರತಿ ಇಲ್ಲವೇ ನೃತ್ಯಗುರುಗಳಿಂದ ಅರ್ಹತಾಪತ್ರ ತರುವುದು ಉತ್ತಮ.) ವಿಚಾರಸಂಕಿರಣದ ಸಮಾರೋಪದಲ್ಲಿ ಕಮ್ಮಟದ ಅಭ್ಯರ್ಥಿಗಳಿಗೆ ಮತ್ತು ಸಂಶೋಧನಾಲೇಖನ ಮಂಡನೆ ಮಾಡುವವರಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಗುವುದು.
- ಲೇಖನಗಳಿಗೆ ಪೂರಕವಾದ ಪ್ರಾತ್ಯಕ್ಷಿಕೆಯ ನೆಲೆಗಳನ್ನು ಅಭ್ಯರ್ಥಿಗಳೇ ಹೊಂದಿಸಿಕೊಳ್ಳಬೇಕು. ಪ್ರಯಾಣ ಭತ್ಯೆ, ವಸತಿ ಸೌಕರ್ಯಗಳನ್ನು ಅಭ್ಯರ್ಥಿಗಳೇ ಸ್ವಂತ ಖರ್ಚಿನಲ್ಲಿ ಭರಿಸಿಕೊಳ್ಳತಕ್ಕದ್ದು. ವಿಚಾರಸಂಕಿರಣದಲ್ಲಿ ಮಾತ್ರ ಊಟೋಪಚಾರದ ವ್ಯವಸ್ಥೆಯಿರುತ್ತದೆ.
- ಸಂಶೋಧನಾ ಲೇಖನ ಮಂಡಿಸುವವರಿಗೆ ಪ್ರವೇಶ ಶುಲ್ಕ : 300 ರೂ. ಮೊತ್ತವನ್ನು ಲೇಖನ ಆಯ್ಕೆಯ ಬಳಿಕ ಪೂರ್ಣ ಪ್ರತಿ ಸಲ್ಲಿಸುವ ಸಮಯದಲ್ಲಿ 'ನೂಪುರ ಭ್ರಮರಿ' ಹೆಸರಿಗೆ ಡಿ.ಡಿ/ ಮನಿ ಆರ್ಡರ್ ಮೂಲಕ ಕಳಿಸಬೇಕು.

- ಆಯ್ಕೆ ಸಮಿತಿಯ ತೀರ್ಪುಗಾರರ ನಿರ್ಧಾರವೇ ಅಂತಿಮ.
- ಸಂಶೋಧನಾ ಲೇಖನಗಳನ್ನು ಕಳಿಸಿದ ತರುವಾಯ ವೈಯಕ್ತಿಕ ಸಂಪರ್ಕಕ್ಕೆ, ಪ್ರಶ್ನೋತ್ತರಗಳಿಗೆ ಆಸ್ಪದವಿಲ್ಲ.
- ಪ್ರವೇಶಗಳನ್ನು ಕಳಿಸಿಕೊಡಲು ಅಂತಿಮ ದಿನಾಂಕ : ಜನವರಿ 1, 2012.
  ಪೂರ್ಣ ಲೇಖನದ ಪ್ರತಿಯನ್ನು ಸ್ವೀಕರಿಸಲು ಕೊನೆಯ ದಿನಾಂಕ ಜನವರಿ 25, 2012.

ಪ್ರತಿಷ್ಠಾನದ ಸದಸ್ಯರಾಗುವಲ್ಲಿಯೂ ಆಸಕ್ತರಿಗೆ ಅವಕಾಶವಿದ್ದು, ಸಂಶೋಧನಾ ಮಾರ್ಗದರ್ಶನಗಳನ್ನು ಪಡೆದುಕೊಳ್ಳಲು ಸಂಪನ್ಮೂಲ ವ್ಯಕ್ತಿಗಳ ಲಭ್ಯತೆಯಿದೆ. ಅಂತೆಯೇ ಕರ್ನಾಟಕ ಸಂಶೋಧಕರ ಒಕ್ಕೂಟದ ಸದಸ್ಯರಾಗುವಲ್ಲಿಯೂ ಅವಕಾಶಗಳು ಮುಕ್ತವಾಗಿವೆ.
ಹೆಚ್ಚಿನ ವಿವರಗಳಿಗೆ ಕೆಳಕಂಡ ವಿಳಾಸವನ್ನು ಸಂಪರ್ಕಿಸುವುದು.

**ಪ್ರವೇಶಗಳನ್ನು ಕಳುಹಿಸಬೇಕಾದ ವಿಳಾಸ**


**ನೂಪುರ ಭ್ರಮರಿ ಪ್ರತಿಷ್ಠಾನ**
**c/o ಬಿ.ಕೆ.ವಿಜಯೇಂದ್ರ**
**ನಂ. 64(33), 2ನೇ ಅಡ್ಡರಸ್ತೆ**
**ಗವಿಪುರಂ ಬಡಾವಣೆ**
**ಬಸವನಗುಡಿ, ಬೆಂಗಳೂರು**

**ದೂರವಾಣಿ: 9964140927**

**ಈ ಮೈಲ್ : editor@noopurabhramari.com**

**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: www. noopurabhramari.com**